# ವರ್ಣಮಾಲೆ (49)

## ಸ್ವರ-13

| ಹ್ರಸ್ವ-6 | ದೀರ್ಘ-7 |
|---|---|
| ಅ | ಆ |
| ಇ | ಈ |
| ಉ | ಊ |
| ಋ | ಏ |
| ಎ | ಐ |
| ಒ | ಓ |
| | ಔ |

## ವ್ಯಂಜನ-34

### ವರ್ಗೀಯ-25

| ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ |
|---|---|---|
| ಕ್ ಗ್ | ಖ್ ಘ್ | ಙ್ |
| ಚ್ ಜ್ | ಛ್ ಝ್ | ಞ್ |
| ಟ್ ಡ್ | ಠ್ ಢ್ | ಣ್ |
| ತ್ ದ್ | ಥ್ ಧ್ | ನ್ |
| ಪ್ ಬ್ | ಫ್ ಭ್ | ಮ್ |

### ಅವರ್ಗೀಯ-9

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

## ಯೋಗವಾಹ-2

| ಅನುಸ್ವಾರ-1 | ವಿಸರ್ಗ-1 |
|---|---|
| ಂ | ಃ |

Use E-Papers, Save Trees
Above line hide when print out

# ಸ್ವರಗಳು

ಅರ್ಥ : ಸ್ವತಂತ್ರವಾಗಿ ಉಚ್ಚಾರಮಾಡಲಾಗುವ ಅಕ್ಷರಗಳನ್ನು ಸ್ವರಗಳೆಂದು ಕರೆಯುತ್ತೇವೆ.

ಉದಾ : ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ (13)

- ಸ್ವರದ ಪ್ರಕಾರಗಳು : ಸ್ವರದಲ್ಲಿ 3 ವಿಧ.
- 1. ಹ್ರಸ್ವಸ್ವರ : ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವಸ್ವರ ಎನ್ನುತ್ತಾರೆ.
- ಉದಾ : ಅ, ಇ, ಉ, ಋ, ಎ, ಒ (06)
- 2. ದೀರ್ಘಸ್ವರ : ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ದೀರ್ಘಸ್ವರ ಎನ್ನುತ್ತಾರೆ.
- ಉದಾ : ಆ ಈ ಊ ಏ ಐ ಓ ಔ (07)
- 3. ಪ್ಲುತಸ್ವರ : ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳಿಗೆಲ್ಲ ಪ್ಲುತಸ್ವರ ಎನ್ನುತ್ತಾರೆ.
- ಉದಾ : ಅಮ್ಮಾಽ ದೇವರೇಽ
- ಪ್ಲುತಸ್ವರಗಳನ್ನು 'ಽ' ಚಿಹ್ನೆಯಿಂದ ಗುರುತಿಸುತ್ತಾರೆ.

# ವ್ಯಂಜನಗಳು

ಅರ್ಥ : ಸ್ವರಗಳ ಸಹಾಯದಿಂದ ಮಾತ್ರ ಉಚ್ಚಾರಮಾಡಲಾಗುವ ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುತ್ತೇವೆ.

ಉದಾ : ಕ್ + ಅ = ಕ

- ವ್ಯಂಜನದ ಪ್ರಕಾರಗಳು : ವ್ಯಂಜನದಲ್ಲಿ 2 ವಿಧ.

- 1. ವರ್ಗೀಯವ್ಯಂಜನ : ಕ್ ದಿಂದ ಮ್ ವರೆಗಿನ 25 ಅಕ್ಷರಗಳನ್ನು ವರ್ಗೀಯ ವ್ಯಂಜನ ಎನ್ನುತ್ತಾರೆ.
- ಉಚ್ಚರಿಸುವಾಗ ಅವು ಹುಟ್ಟುವ ಸ್ಥಳವನ್ನು ಆಧರಿಸಿ ಅವನ್ನು 5 ವರ್ಗಗಳಾಗಿ ವಿಂಗಡಿಸಲಾಗಿದೆ.
- ಉದಾ :

| ವರ್ಗ | ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | |
|---|---|---|---|---|---|---|
| ಕ | ಕ್ | ಖ್ | ಗ್ | ಘ್ | ಙ್ | |
| ಚ | ಚ್ | ಛ್ | ಜ್ | ಝ್ | ಞ್ | |
| ಟ | ಟ್ | ಠ್ | ಡ್ | ಢ್ | ಣ್ | ಒಟ್ಟು = 25 |
| ತ | ತ್ | ಥ್ | ದ್ | ಧ್ | ನ್ | |
| ಪ | ಪ್ | ಫ್ | ಬ್ | ಭ್ | ಮ್ | |

Use E-Papers, Save Trees
Above line hide when print out

- ಈ 25 ಅಕ್ಷರಗಳನ್ನು ಮೂರು ರೀತಿಯಾಗಿ ಉಚ್ಚರಿಸುತ್ತೇವೆ.

1 ಅಲ್ಪಪ್ರಾಣ: ಅಲ್ಪ ಎಂದರೆ ಕಡಿಮೆ ಪ್ರಾಣ ಎಂದರೆ ಉಸಿರು ಎಂದರ್ಥ. "ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಅಲ್ಪಪ್ರಾಣ ಎನ್ನುತ್ತಾರೆ"

ಉದಾ: ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್ (10)

2. ಮಹಾಪ್ರಾಣ: ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಮಹಾಪ್ರಾಣ ಎನ್ನುತ್ತಾರೆ

ಉದಾ : ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್ (10)

3.ಅನುನಾಶಿಕಗಳು : ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಅನುನಾಶಿಕಗಳು ಎನ್ನುತ್ತಾರೆ"

ಉದಾ : ಙ್ ಞ್ ಣ್ ನ್ ಮ್ (05)

- 2. ಅವರ್ಗೀಯ ವ್ಯಂಜನಗಳು : ಯಾವ ವರ್ಗಕ್ಕೂ ಸೇರದ ಪ್ರತ್ಯೇಕವಾಗಿರುವ ಒಂಬತ್ತು ಅಕ್ಷರಗಳನ್ನು ಅವರ್ಗೀಯ ವ್ಯಂಜನ ಎನ್ನುತ್ತಾರೆ.
- ಉದಾ : ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = 9

- 3.ಯೋಗವಾಹಗಳು : ಯೋಗ ಎಂದರೆ ಕೂಡು, ವಾಹ ಎಂದರೆ ಹೋಗುವ ಎಂದರ್ಥ. ಯೋಗವಾಹ ಎಂದರೆ ಕೂಡಿಹೋಗುವ (ಕೂಡಿಕೊಂಡಿರುವ)ಅಂದರೆ "ಬೇರೆ ಅಕ್ಷರಗಳ ಸಂಬಂಧ ಪಡೆದಾಗ ಮಾತ್ರ ಉಚ್ಚರಿಸುವ ಅಕ್ಷರಕ್ಕೆ ಯೋಗವಾಹ ಎನ್ನುತ್ತಾರೆ"
- ಯೋಗವಾಹದ ಪ್ರಕಾರಗಳು : ಯೋಗವಾಹದಲ್ಲಿ 2 ವಿಧ.
- 1. ಅನುಸ್ವಾರ : ಸ್ವರದ ಸಂಬಂಧ ಪಡೆದ ಒಂದು ಸೊನ್ನೆಗೆ ಅನುಸ್ವಾರ ಎನ್ನುತ್ತಾರೆ.
  ಉದಾ: ಂ
- ವಿಸರ್ಗ : ಸ್ವರದ ಸಂಬಂಧ ಪಡೆದ ಒಂದರ ಮೇಲೊಂದಿರುವ ಎರಡು ಸೊನ್ನೆಗೆ ವಿಸರ್ಗಎನ್ನುತ್ತಾರೆ.
  ಉದಾ : ಃ

Use E-Papers, Save Trees
Above line hide when print out

# ನೆನಪಿಡುವ ಅಂಶಗಳು

- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಮೂಲಾಕ್ಷರಗಳು--------------- 49
- ಒಟ್ಟು ಸ್ವರಾಕ್ಷರಗಳು---------------------------------------- 13
- ಒಟ್ಟು ಹ್ರಸ್ವ ಸ್ವರಾಕ್ಷರಗಳು------- ------------------------------ 06
- ಒಟ್ಟು ದೀರ್ಘ ಸ್ವರಾಕ್ಷರಗಳು------------------------------------ 07
- ಒಟ್ಟು ವ್ಯಂಜನಾಕ್ಷರಗಳು--------------------------------------- 34
- ಒಟ್ಟು ವರ್ಗೀಯ ವ್ಯಂಜನಾಕ್ಷರಗಳು------------------------- 25
- ಒಟ್ಟು ಅವರ್ಗೀಯ ವ್ಯಂಜನಾಕ್ಷರಗಳು------------------------ 09
- ಒಟ್ಟು ಅಲ್ಪ ಪ್ರಾಣ ವ್ಯಂಜನಾಕ್ಷರಗಳು------------------------- 10
- ಒಟ್ಟು ಮಹಾ ಪ್ರಾಣ ವ್ಯಂಜನಾಕ್ಷರಗಳು----------------------- 10
- ಒಟ್ಟು ಅನುನಾಸಿಕ ಅಕ್ಷರಗಳು---------------------------------- 05
- ಒಟ್ಟು ಯೋಗವಾಹಗಳು-------------------------------------- 02
- ಅನುಸ್ವಾರ-------------------------------------------------- 01
- ವಿಸರ್ಗ---------------------------------------------------- 01

# ಗುಣಿತಾಕ್ಷರ

- ಅರ್ಥ : ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರಕ್ಕೆ ಗುಣಿತಾಕ್ಷರ
- ಎನ್ನುತ್ತಾರೆ.
- ಒಂದು ವ್ಯಂಜನಕ್ಕೆ ಅ ದಿಂದ ಔ ವರೆಗಿನ 13 ಸ್ವರಗಳು ಸೇರಿದರೆ 13 ಗುಣಿತಾಕ್ಷರಗಳಾಗುತ್ತವೆ. 34 ವ್ಯಂಜನಗಳಿಗೆ ತಲಾ 13 ಸ್ವರಾಕ್ಷರಗಳನ್ನು ಸೇರಿಸುವುದರಿಂದ 442 ಗುಣಿತಾಕ್ಷರಗಳನ್ನು ರಚಿಸಬಹುದು. ಅದೇ ರೀತಿ ಯೋಗವಾಹಗಳನ್ನು 2 ಸೇರಿಸಿದರೆ 510 ಗುಣಿತಾಕ್ಷರಗಳು ರಚನೆಯಾಗುತ್ತವೆ.

| ವ್ಯಂಜನ | | ಸ್ವರ | | ಗುಣಿತಾಕ್ಷರ | ವ್ಯಂಜನ | | ಸ್ವರ | | ಗುಣಿತಾಕ್ಷರ |
|---|---|---|---|---|---|---|---|---|---|
| ಕ್ | + | ಅ | = | ಕ | ಕ್ | + | ಎ | = | ಕೆ |
| ಕ್ | + | ಆ | = | ಕಾ | ಕ್ | + | ಏ | = | ಕೇ |
| ಕ್ | + | ಇ | = | ಕಿ | ಕ್ | + | ಐ | = | ಕೈ |
| ಕ್ | + | ಈ | = | ಕೀ | ಕ್ | + | ಒ | = | ಕೊ |
| ಕ್ | + | ಉ | = | ಕು | ಕ್ | + | ಓ | = | ಕೋ |
| ಕ್ | + | ಊ | = | ಕೂ | ಕ್ | + | ಔ | = | ಕೌ |
| ಕ್ | + | ಋ | = | ಕೃ | ಕ್ | + | ಅಂ | = | ಕಂ |
| | | | | | ಕ್ | + | ಅಃ | = | ಕಃ |

Use E-Papers, Save Trees
Above line hide when print out

# ಸಂಯುಕ್ತಾಕ್ಷರ/ ದ್ವಿತ್ವಾಕ್ಷರ/ ಒತ್ತಕ್ಷರ

- ಅರ್ಥ : ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರಕ್ಕೆ ಸಂಯುಕ್ತಾಕ್ಷರ ಎನ್ನುತ್ತಾರೆ.
- ಪ್ರಕಾರಗಳು : ಒತ್ತಕ್ಷರದಲ್ಲಿ 2 ವಿಧ.
- 1. ಸಜಾತಿಯ ಸಂಯುಕ್ತಾಕ್ಷರ : ಒಂದು ವ್ಯಂಜನಕ್ಕೆ ಅದೇ ಜಾತಿಯ ವ್ಯಂಜನ ಸೇರಿದರೆ ಸಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.
- ಉದಾ : ಅಪ್ಪ = ಪ್+ಪ್+ಅ = ಪ್ಪ
- ಅಕ್ಕ = ಕ್+ಕ್+ಅ = ಕ್ಕ

- 2. ವಿಜಾತೀಯ ಸಂಯುಕ್ತಾಕ್ಷರ : ಒಂದು ವ್ಯಂಜನಕ್ಕೆ ಬೇರೆ ಜಾತಿಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ವ್ಯಂಜನ ಸೇರಿದರೆ ವಿಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.
- ಉದಾ : ಉಷ್ಣ = ಷ್+ಣ್+ಅ = ಷ್ಣ
- ಅಸ್ತ್ರ = ಸ್+ತ್+ರ್+ಅ = ಸ್ತ್ರ